ಪದಗಳ ಸೊಗಡನ್ನು ಅಷ್ಟೆ ಪ್ರಭಾವಕಾರಿಯಾಗಿ ಹಾಗೂ ಅರ್ಥಗರ್ಭಿತವಾಗಿ ಆಂಗ್ಲಭಾಷೆಯಲ್ಲಿ ತರಲು ಸಾಧ್ಯವಾಗಲಿಲ್ಲ. ಹಾಗೆಂದು ಆ ಭಾಗಗಳನ್ನು ಮಾತ್ರ ಕನ್ನಡದಲ್ಲಿ ಬರೆದು, ಉಳಿದ ಕತೆಯನ್ನು ಆಂಗ್ಲಭಾಷೆಯಲ್ಲಿಯೇ ಮುಂದುವರಿಸುವುದು ಅಭಾಸವಾಗಿ ಕಂಡಿತು. ಏನು ಮಾಡಬೇಕೆಂದು ತೀರ್ಮಾನಿಸಲು ಕಷ್ಟವಾದಾಗ, 'ನಾನೇಕೆ ಕನ್ನಡದಲ್ಲಿಯೇ ಬರೆಯಬಾರದು?' ಎಂಬ ಪ್ರಶ್ನೆ ಕಾಡತೊಡಗಿತು.

ನಾನು ಆಂಗ್ಲ ಭಾಷೆಯಲ್ಲಿ ಬರೆಯಲು ಪ್ರಾರಂಭಿಸಿದ ಕಾರಣ ಇಷ್ಟೆ: ಮೂರು ದಶಕಗಳ ಹಿಂದೆ ಕಾಲೇಜಿನ ಕನ್ನಡದ ಭಾಷಾ ಪರೀಕ್ಷೆಗೆ ಶಾಕುಂತಲೆಯ ಉಂಗುರದ ಬಗ್ಗೆ ಪುಟಗಟ್ಟಲೆ ಬರೆಯುವುದರೊಂದಿಗೆ ಬಹುಶಃ ನನ್ನ ಕನ್ನಡದ 'ಪಾಂಡಿತ್ಯ'ದ ಪ್ರದರ್ಶನ ಕೊನೆಗೊಂಡಿತ್ತು. ಆನಂತರದ ಮುವತ್ತೈದು ವರ್ಷಗಳ ಕಾಲ ನಾನು ಕನ್ನಡದಲ್ಲಿ ಏನನ್ನಾದರೂ ಬರೆಯಬಲ್ಲೆ ಎಂಬ ಯೋಚನೆಯೂ ಸುಳಿದಿರಲಿಲ್ಲ; ಸುಳಿಯುವ ಸಂದರ್ಭವೂ ಒದಗಿರಲಿಲ್ಲ. ನನ್ನ ತಂದೆಗೆ ಬರೆಯುತ್ತಿದ್ದ ತೆರೆದ ಅಂಚೆಯ 'ಕಾರ್ಡ್'ಗಳಲ್ಲಿ ಮತ್ತು ವೀಣಾ ಪರಿಚಯವಾದ ನಂತರ, ಕದ್ದು ಮುಚ್ಚಿ ಆಕೆಗೆ ಬರೆಯುತ್ತಿದ್ದ ಅಪಕ್ವವಾದ 'ಪ್ರೇಮ ಪತ್ರ'ಗಳಲ್ಲಿ ನನ್ನ ಕನ್ನಡ 'ಭಾಷಾ ಪಾಂಡಿತ್ಯ'ವನ್ನು ಪ್ರಕಟಗೊಳಿಸುತ್ತಿದ್ದುದರ ಹೊರತಾಗಿ ನಾನು ಕನ್ನಡದಲ್ಲಿ ಬರೆಯುವುದನ್ನೇ ರೂಢಿಸಿಕೊಂಡಿರಲಿಲ್ಲ. ಆದ್ದರಿಂದ ಕನ್ನಡದಲ್ಲಿ ಸೂಕ್ತವಾಗಿ ಬರೆಯಬಲ್ಲೆ ಎಂಬ ಧೈರ್ಯವಿರಲಿಲ್ಲ. ಬದಲಿಗೆ, ಇದೇ ಕಾಲಘಟ್ಟದಲ್ಲಿ ವಿಜ್ಞಾನದ ನಿಯತಕಾಲಿಕೆಗಳಿಗೆ ಸಂಶೋಧನಾ ಪ್ರಬಂಧಗಳನ್ನು ಬರೆಯಲೋಸುಗ ಆಂಗ್ಲ ಭಾಷೆಯಲ್ಲಿ ಬರೆಯುವುದನ್ನು ವಿಧಿಯಿಲ್ಲದೆ ರೂಢಿಸಿಕೊಂಡಿದ್ದೆ. ಸುಮಾರು ಇನ್ನೂರಕ್ಕೂ ಹೆಚ್ಚಿನ ಅಂತಹ ಪ್ರಬಂಧಗಳನ್ನು ಬರೆದಿದ್ದುದರಿಂದ ಆಂಗ್ಲ ಭಾಷೆಯಲ್ಲಿ ಬರೆಯಬಲ್ಲೆ ಎಂಬ ಹುಚ್ಚುಧೈರ್ಯ ಸ್ವಾಭಾವಿಕವಾಗಿ ಮೂಡಿತ್ತು. ಆದ್ದರಿಂದಲೆ ಆಂಗ್ಲ ಭಾಷೆಯಲ್ಲಿ ಕಾದಂಬರಿ ಬರೆಯಲು ಪ್ರಾರಂಭಿಸಿದ್ದು. ಆದರೆ 'ಕನಕಮುಸುಕು' ರಚಿಸುವಲ್ಲಿ ನಮ್ಮ ಭಾಷೆಯ ಪದವಿಶೇಷಗಳಿಂದ ಹಾಗೂ ಅವುಗಳ ಉಚ್ಚಾರಣೆಯಿಂದ ಸೃಷ್ಟಿಸಬಹುದಾದ ರಹಸ್ಯ ಕೋಡ್‌ಗಳ ಬಳಕೆಗೆ ಸಿಕ್ಕ ಅವಕಾಶ, ಹಾಗೂ ಪ್ರಸ್ತುತ ಕಾದಂಬರಿಗೆ ಅವುಗಳ ಅನಿವಾರ್ಯತೆ, ಎರಡೂ ಸೇರಿ ನನ್ನನ್ನು ಕನ್ನಡದಲ್ಲಿ ಬರೆಯುವತ್ತ ಒತ್ತಾಯಪೂರ್ವಕವಾಗಿ ಕರೆತಂದಿದ್ದವು. ಹೆದರುತ್ತಲೆ ಪ್ರಾರಂಭಿಸಿದೆ.

ಸುಮಾರು 100 ಪುಟಗಳಷ್ಟು ಕನ್ನಡದಲ್ಲಿ ಬರೆದಿದ್ದೆ.

ಒಂದು ರಾತ್ರಿ, ಸುಮಾರು 10.00 ಗಂಟೆ. ಕಾದಂಬರಿ ಬರೆಯುತ್ತ ಕೂತಿದ್ದೆ.

ಹದಿನೈದು ವರ್ಷದ ಮಗಳು ಪುಣ್ಯಕೋಟಿ ಬಂದು ನಾನು ಹರಡಿಕೊಂಡಿದ್ದ ಕೆಲವು ಚಿತ್ರಗಳನ್ನು ನೋಡಿ ಅವು ಏನೆಂದು ಕೇಳಿದಳು. ಎಲ್ಲವನ್ನೂ ಬದಿಗೊತ್ತಿ, ಅವಳನ್ನು ತೊಡೆಯಮೇಲೆ ಮಲಗಿಸಿಕೊಂಡು ನನ್ನ ಕಥಾಹಂದರದ ವಿವರಗಳನ್ನು ಹೇಳತೊಡಗಿದೆ– ನಾನು ಹೇಳುತ್ತಿರುವುದು ಕತೆ ಎಂಬುವುದನ್ನು ಬಚ್ಚಿಟ್ಟು, ಇತ್ತೀಚೆಗೆ ನಡೆದ ಘಟನೆಗಳ ಸರಮಾಲೆ ಎಂಬ ರೂಪದಲ್ಲಿ. ರಾತ್ರಿ 12 ಗಂಟೆಯವರೆಗೆ ಕುತೂಹಲದಿಂದಲೇ ಕೇಳುತ್ತಿದ್ದಳು. ಇನ್ನು ಸಾಕು, ಮಿಕ್ಕ ವಿವರ ಮತ್ತೊಮ್ಮೆ ಹೇಳುತ್ತೇನೆ ಎಂದರೆ ಕೇಳಲಿಲ್ಲ. 'ಇಲ್ಲ ಅಪ್ಪಾಜಿ. ಪಾಪ ಆ ಚರಿತ್ರೆಯ ಸಂಶೋಧಕಿಗೆ ಏನಾಯಿತು? ಆಕೆಯ ಮಗಳನ್ನು ಯಾರು ಕರೆದೊಯ್ದರೆಂದು ತಿಳಿಯಿತೆ? ಸೋಮನಾಥಪುರದಲ್ಲಿ ಜೈನ ನಿಧಿಗೆ ಕುರುಹುಗಳು ದೊರಕಿದವೆ? ಆ ನಿಧಿ ಸಿಕ್ಕಿದೆಯೆ? ಸರಕಾರ ಆ ನಿಧಿಯನ್ನು ಏನು ಮಾಡಿತು?...' ಎಂಬಿಂತಹ ಪ್ರಶ್ನೆಗಳನ್ನು ಮುಂದಿಟ್ಟು ಉತ್ತರಕ್ಕೆ ಒತ್ತಾಯಿಸಿದಾಗ ನಿಜಕ್ಕೂ ನನ್ನ ಕಾದಂಬರಿಯ ಮೇಲೆ ನಂಬಿಕೆ ಗಟ್ಟಿಯಾಯಿತು.